ಮಾಡುತ್ತಿದ್ದಾರೆ. ಮೊನ್ನೆ ಮಾನ್ಯ ಶಿವಾನಂದ ಪಾಟೀಲರು ಆ ಪ್ರಕರಣದ ಬಗ್ಗೆ ಒಂದೆರಡು ಸ್ಪಷ್ಟೀಕರಣವನ್ನು ಕೇಳುತ್ತೇನೆಂದರೆ ಅವಕಾಶವನ್ನು ಕೊಡಲಿಲ್ಲ. ಮಾನ್ಯ ಗೃಹಮಂತ್ರಿಗಳು ಸದನಕ್ಕೆ ಬಂದು ಕುಳಿತಾಗ ಮಾನ್ಯ ಶಿವಾನಂದ ಪಾಟೀಲರು ಸ್ಪಷ್ಟನೆ ಕೇಳುವುದಕ್ಕೆ ಸಹಕಾರ ಮಾಡಲಿಲ್ಲ.

ಉಪಾಧ್ಯಕ್ಷರು:- ಮಾನ್ಯ ಶಿವಾನಂದ ಪಾಟೀಲರು ಮಾತನಾಡುವಾಗ ಸಾಕಷ್ಟು ಅವಕಾಶವನ್ನು ಕೊಡಲಾಗಿದೆ.

ಶ್ರೀ ಜಗದೀಶ್ ಶೆಟ್ಟರ್:- ಅವರಿಗೆ ಅವಕಾಶ ಕೊಡಲಿಲ್ಲ, ಝಳಕಿ ಪ್ರಕರಣದಲ್ಲಿ ಗೋಲಿಬಾರ್ ಆದ ಸಂದರ್ಭದಲ್ಲಿ 3 ಗಂಟೆಗೆ ಸದನ ಸೇರಿದಮೇಲೆ ಶಿವಾನಂದ ಪಾಟೀಲರ ಪರರಾಗಿ ಮಾನ್ಯ ಸಿಂಧ್ಯಾರವರು, ನಾವು ಎಲ್ಲರೂ ಮಾತನಾಡಿದ್ದೇವೆ, ಆಗ ಶಿವಾನಂದಪಾಟೀಲರು ಕೆಲವೊಂದು ಸ್ಪಷ್ಟೀಕರಣ ಕೇಳುತ್ತಾರೆ, ಅವಕಾಶ ಮಾಡಿಕೊಡಿ ಎಂದು ಸಭಾಧ್ಯಕ್ಷರನ್ನು ಕೇಳಿದಾಗ ಸಭಾಧ್ಯಕ್ಷರು ಖರ್ಗೆಯವರ ಮುಖವನ್ನು ಅವರು ಏನು ಹೇಳುತ್ತಾರೆಂದು ನೋಡಿದರು. ಆ ಇಲಾಖೆಗೆ ಸಂಬಂಧಪಟ್ಟಂತೆ ಬೇಡಿಕೆಯ ಮೇಲೆ ಮಾತನಾಡುವಾಗ ಮಾತನಾಡಿ ಎಂದು ಹೇಳಿದರು. ಇಂತಹ ಘಟನೆಗಳು ನಡೆದಾಗ ಸರ್ಕಾರ ಬೇಜವಾಬ್ದಾರಿಯಿಂದ ನಡೆದುಕೊಂಡಾಗ ಇಂತಹ ಘಟನೆಗಳ ಪುನರಾವರ್ತನೆಗಳಾಗುತ್ತಿವೆ. ಹೀಗಾಗಿ ಇವತ್ತು ಆ ಝಳಕಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ರಮ ಕೈಗೊಂಡು ಆ ಎಸ್‌ಪಿಯನ್ನು ವರ್ಗಾವಣೆ ಮಾಡಬಹುದಾಗಿತ್ತು, ಅವರು ಇನ್ನು ಅಲ್ಲಿಯೇ ಇದ್ದಾರೆ, ಸಿಓಡಿ ತನಿಖೆ ಬೇಡ, ಸಿಬಿಐ ತನಿಖೆಯನ್ನು ಮಾಡಿ ಎಂದು ಒತ್ತಾಯ ಮಾಡಿದೆವು; ಅದಕ್ಕೆ ಸರ್ಕಾರ ಒಪ್ಪಲಿಲ್ಲ, ಸರ್ಕಾರ ಯಾವುದಕ್ಕೂ ಸ್ಪಂದಿಸುತ್ತಿಲ್ಲ. ಇವತ್ತು ಬೇಜವಾಬ್ದಾರಿಯಿಂದ ಸರ್ಕಾರ ನಡೆದುಕೊಳ್ಳುತ್ತಿದೆ; ಇದರಿಂದಾಗಿ ಇವತ್ತು ಇಂತಹ ಅನಾಹುತಗಳು ಗೃಹ ಇಲಾಖೆಯಿಂದ ನಡೆಯುತ್ತಿದೆ. ಅದಕ್ಕಾಗಿ ತಕ್ಷಣ ಸರ್ಕಾರದವರು ಈ ಬಗ್ಗೆ ಏನಾದರೂ ಹೇಳುವಂಥದ್ದಾಗಬೇಕು ಮತ್ತು ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು; ಇದಕ್ಕೆ ಸರ್ಕಾರ ಒಪ್ಪಿಕೊಳ್ಳಬೇಕು.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಯಾವುದೋ ವಿಚಾರವನ್ನು ತೆಗೆದುಕೊಂಡು ಯಾವುದಕ್ಕೋ ಜೋಡಿಸುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:- ಝಳಕಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸರಿಯಾಗಿ ಚರ್ಚೆಯಾಗಲಿಲ್ಲ, ತಪ್ಪಿತಸ್ಥ ಅಧಿಕಾರಿಯ ಮೇಲೆ ಕ್ರಮ ಕೈಗೊಂಡಿದ್ದರೆ ಈ ಅನಾಹುತವಾಗುತ್ತಿರಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:- ಚರ್ಚೆಗೆ ಅವಕಾಶವನ್ನು ಮಾಡಿಕೊಡುವವರು ಅಧ್ಯಕ್ಷರು, ಅದರ ಉಪಯೋಗವನ್ನು ಮಾಡಿಕೊಳ್ಳಿರಿ.

ಶ್ರೀ ಕೆ.ವಿಶ್ವೇಶ್ವರ ಹೆಗಡೆ:- ಇವತ್ತು ಆಗಿರುವ ಘಟನೆ- ಈ ಸರ್ಕಾರದ ಒಳಜಗಳದ ಪ್ರತೀಕವೆಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:- ಸರ್ಕಾರದ ಈ ಮನೋಭಾವನೆಯನ್ನು ನಾವು ಪ್ರತಿಭಟಿಸುತ್ತಿದ್ದೇವೆ.

(ಈ ಸಂದರ್ಭದಲ್ಲಿ ಬಿಜೆಪಿ ಸದಸ್ಯರು ಸದನದ ಬಾವಿಗೆ ಬಂದರು)